**Crl.Mis** 640/2021
**PW**-1

<u>ಮುಂದುವರೆದ ಪಾಟೀಸವಾಲು ಎದುರುದಾರರ ಪರ ಶ್ರೀ ವಿ.ವಿ. ವಕೀಲರಿಂದಃ</u>

ನಿಮ್ಮ ಅರ್ಜಿಯ ಪ್ಯಾರಾ 6 ರಲ್ಲಿ ಬೇರೆ ಜಾತಿಯ ಹುಡುಗಿಯೊಂದಿಗೆ ಮದುವೆ ಮಾಡುತ್ತೇವೆ, ನೀವು ಕೆಳ ಜಾತಿಗೆ ಸೇರಿದವಳು ಅಂತ ಹಿಂಸೆ ನೀಡುತ್ತಿದ್ದರು ಎಂದು ಹೇಳಿದ್ದು, ಅದನ್ನು ನೋಡಿದವರು ಇದ್ದಾರಾ ಎಂದರೆ ಸಾಕ್ಷಿ ನೋಡಿದವರು ಇಲ್ಲ, ಜೊತೆಯಲ್ಲಿ ಇದ್ದಾಗ 1 ನೇ ಎದುರುದಾರನ ತಂದೆ-ತಾಯಿ ಹೇಳಿಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನೀವು ಹಾಗೂ 1 ನೇ ಎದುರುದಾರ ಜೊತೆಯಲ್ಲೆ ವಾಸ ಇದ್ದ ಬಗ್ಗೆ ನೋಡಿದವರು ಇದ್ದಾರಾ ಎಂದರೆ ಸಾಕ್ಷಿ ಬಾಡಿಗೆ ಮನೆಯ ಮಾಲೀಕರು ಎಂದು ಹೇಳುತ್ತಾರೆ. ಸದರಿ ಮಾಲೀಕರ ಹೆಸರು ಪುಟ್ಟರಾಜು, ಅವರ ಮನೆ ಇರುವುದು ಬೇರೆ ಯವರ ಹೆಸರಿನಲ್ಲಿ ಎಂದು ಹೇಳುತ್ತಾರೆ. ಸದರಿ ಮನೆ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ನಂಜಪ್ಪ ಸುಲಿಮಾಡ ಎಂದು ಹೇಳುತ್ತಾರೆ.

ನಿಮಗೆ ಬಾಡಿಗೆ ಮನೆಯಲ್ಲಿದ್ದ ಬಗ್ಗೆ ಬಾಡಿಗೆ ಕರಾರು ಮಾಡಿಕೊಟ್ಟಿದ್ದರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, 1 ನೇ ಎದುರುದಾರನಿಗೆ ಗೊತ್ತು ಎಂದು ಹೇಳುತ್ತಾರೆ. ಈಗಲೂ ನೀವು ಆ ಮನೆಯಲ್ಲೇ ವಾಸ ಇದ್ದಿರಾ ಎಂದರೆ ಸಾಕ್ಷಿ ಈಗ ಇಲ್ಲ ಎಂದು ಹೇಳುತ್ತಾರೆ. ನೀವು ಯಾವ ದಿನಾಂಕದಂದು ಬಾಡಿಗೆ ಮನೆಯನ್ನು ಬಿಟ್ಟು ಬಂದಿರುತ್ತೀರಾ ಎಂದರೆ ಸಾಕ್ಷಿ ದಿಃ06-02-2021 ರಲ್ಲಿ ಎಂದು ಹೇಳುತ್ತಾರೆ. ಬಾಡಿಗೆ ಮನೆಯನ್ನು ಬಿಟ್ಟು ಬರುವ ಸಂದರ್ಭದಲ್ಲಿ ಮನೆ ಕೀ ಯಾರಿಗೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಬಾಡಿಗೆ ಮನೆಯ ಮಾಲೀಕರಿಗೆ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಸದರಿ ಬಾಡಿಗೆ ಮನೆಯ ಮಾಲೀಕನನ್ನು ಸಾಕ್ಷ್ಯ ಹೇಳಿಸಲು ನಿಮಗೇನು ತೊಂದರೆ ಇಲ್ಲ ಎಂದರೆ ಸಾಕ್ಷಿ ಹೇಳಿಸುತ್ತೇನೆ ಎಂದು ಹೇಳುತ್ತಾರೆ.

2019 ನೇ ಸಾಲಿನಲ್ಲಿ 1 ನೇ ಎದುರುದಾರನ ವಿರುದ್ಧ ಅತ್ಯಾಚಾರ ಪ್ರಕರಣವನ್ನು ದಾಖಲಿಸಿರುತ್ತೀರಾ ಎಂದರೆ ಸರಿ. ಸದರಿ ಪ್ರಕರಣ ಮೈಸೂರಿನ 6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ Spl.C.C.256/2019 ರಂದು ನಡೆದಿರುತ್ತದೆ ಎಂದರೆ ಸರಿ. ಸದರಿ ದೂರನ್ನು ದಾಖಲಿಸುವಾಗ ನಿಮ್ಮನ್ನು ಪರೀಕ್ಷಿಸಿದ ವೈದ್ಯರು ಹೇಮಲತಾ ಎಂದರೆ ಸರಿ. ಸದರಿ ವೈದ್ಯರು Spl.C.C.256/2019 ರಲ್ಲಿ ಸಾಕ್ಷ್ಯ ನುಡಿದಿದ್ದಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನೀವು ಪಿರ್ಯಾದಿ ನೀಡಿದಂತೆ ಏನು ನಡೆದಿಲ್ಲ ಎಂದು ತೀರ್ಪು ಆಗಿದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ 1 ನೇ ಎದುರುದಾರ

ಖುಲಾಸೆಗೊಂಡಿರುತ್ತಾನೆ ಎಂದರೆ ಸರಿ.

ನೀವು ಮೊದಲನೇ ಬಾರಿ ಗರ್ಬಿಣಿಯಾಗಿದ್ದು ಯಾವಾಗ ಎಂದರೆ ಸಾಕ್ಷಿ ಜೂನ್ 2020 ರಲ್ಲಿ ಎಂದು ಹೇಳುತ್ತಾರೆ. ನೀವು ಗರ್ಬಿಣಿಯಾದ ಬಗ್ಗೆ ಏಲ್ಲಿ ಪರೀಕ್ಷೆ ಮಾಡಿಸಿಕೊಂಡಿದ್ದೀರಿ ಎಂದರೆ ಸಾಕ್ಷಿ ಪರೀಕ್ಷೆ ಮಾಡಿಸಿರಲಿಲ್ಲ, ಋತುಮತಿಯಾಗಿ 3-4 ತಿಂಗಳಗಳ ಕಾಲ ಆಗಿತ್ತು ಎಂದು ಹೇಳುತ್ತಾರೆ. ನೀವು ಎರಡನೇ ಬಾರಿ ಗರ್ಬಿಣಿಯಾಗಿದ್ದು ಯಾವಾಗ ಎಂದರೆ ಸಾಕ್ಷಿ ಅಕ್ಟೋಬರ್ 2020 ರಲ್ಲಿ ಎಂದು ಹೇಳುತ್ತಾರೆ. ಆಗ ಗರ್ಬಿಣಿಯಾದ ಬಗ್ಗೆ ಹೇಗೆ ತಿಳಿದುಕೊಂಡಿರಿ ಎಂದರೆ ಸಾಕ್ಷಿ ಮೆಡಿಕಲ್ ನಲ್ಲಿ ಸೀಗುವ Pregnancy Kit ನಿಂದ ಪರೀಕ್ಷಿಸಿದಾಗ ಗೊತ್ತಾಯಿತು ಎಂದು ಹೇಳುತ್ತಾರೆ. ಸದರಿ ಕೀಟ್ ನ್ನು ಯಾವ ಮೆಡಿಕಲ್ ನಲ್ಲಿ ತಂದಿರಿ ಎಂದರೆ ಸಾಕ್ಷಿ 1 ನೇ ಎದುರುದಾರರೇ ಕರೆದುಕೊಂಡು ಹೋಗಿ ಕೊಡೇಸಿದ್ದು ಎಂದು ಹೇಳುತ್ತಾರೆ. ಸದರಿ Pregnancy Kit ಖರೀದಿ ಮಾಡಿದ ಬಗ್ಗೆ ರಶೀದಿ ಕೊಡುತ್ತಾರೆ ಎಂದರೆ ಸಾಕ್ಷಿ ಕೊಟ್ಟಿಲ್ಲ ಎಂದು ಹೇಳುತ್ತಾರೆ. ನೀವು Pregnancy Kit ನಲ್ಲಿ ಪರೀಕ್ಷೆ ಮಾಡಿಕೊಂಡಾ ಎಷ್ಟು ತಿಂಗಳ ಗರ್ಭಿಣಿಯಾಗಿದ್ದೀರಿ ಎಂದರೆ ಸಾಕ್ಷಿ 4 ½ ತಿಂಗಳು ಎಂದು ಹೇಳುತ್ತಾರೆ. Pregnancy Kit ನಲ್ಲಿ ಪರೀಕ್ಷೆ ಮಾಡಿಕೊಂಡ ನಂತರ ನಿವೇನಾದರೂ ವೈದ್ಯರ ಬಳಿ ಹೋಗಿ ಪರೀಕ್ಷೆ ಮಾಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ಮಾತ್ರೆಗಳನ್ನು ಏಲ್ಲಿ ತೆಗೆದುಕೊಂಡಿರುತ್ತೀರಾ ಎಂದರೆ ಸಾಕ್ಷಿ 1 ನೇ ಎದುರುದಾರನೇ ಹುಣಸೂರನಿಂದ ಮೈಸೂರಿಗೆ ತಂದು ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಮಾತ್ರೆಯ ಹೆಸರೇನು ಎಂದರೆ ಸಾಕ್ಷಿ 1 ನೇ ಎದುರುದಾರನೇ ತೆಗೆದುಕೊಟ್ಟಿದ್ದರಿಂದ, ಹೆಸರು ನೋಡಲಿಲ್ಲ ಎಂದು ಹೇಳುತ್ತಾರೆ. ಸದರಿ ಮಾತ್ರೆಯ ಹೆಸರನ್ನು ನೋಡಲು ನಿಮಗೇನು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ, ಆದರೆ ನೋಡಲಿಲ್ಲ ಎಂದು ಹೇಳುತ್ತಾರೆ. ನಿಮ್ಮ ಅರ್ಜಿಯಲ್ಲಿ ಪ್ಯಾರಾ 15 ರಲ್ಲಿ ಹೇಳಿರುವ ಆರೋಪಣೆ ಸುಳ್ಳು ಎಂದರೆ ಸರಿಯಲ್ಲ.

ನೀವು ಹಾಗೂ 1 ನೇ ಎದುರುದಾರ ಒಂದೇ ಸೂರಿನಡಿ ಎಂದೂ ವಾಸ ಇಲ್ಲ ಎಂದರೆ ಸರಿಯಲ್ಲ. ನಿಮ್ಮೊಂದಿಗೆ , 1 ನೇ ಎದುರುದಾರ ಯಾವತ್ತೂ ದೈಹಿಕ ಸಂಪರ್ಕ ಮಾಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ಅರ್ಜಿಯಲ್ಲಿ ಪ್ಯಾರಾ 15 ರಲ್ಲಿ ಹೇಳಿರುವ ಆರೋಪಣೆಯನ್ನು ಪ್ರಕರಣಕ್ಕೊಸ್ಕರ ಸೃಷ್ಟಿ ಮಾಡಿಕೊಂಡಿದ್ದೀರಾ ಎಂದರೆ ಸರಿಯಲ್ಲ.

ನಿಮ್ಮ ಅರ್ಜಿಯಲ್ಲಿ ಪ್ಯಾರಾ 16 ರಲ್ಲಿ ಹೇಳಿರುವಂತೆ ದಿನೇಶ ಎಂಬುವವರ ಸಮಕ್ಷಮದಲ್ಲೂ 1 ನೇ ಎದುರುದಾರ ಬೈದನು ಎಂದು ಸುಳ್ಳಾಗಿ ಹೇಳಿರುತ್ತೀರಾ ಎಂದರೆ ಸರಿಯಲ್ಲ. ಸದರಿ ದಿನೇಶ ರವರನ್ನು ನಿಮ್ಮ ಪರ ಸಾಕ್ಷ್ಯನುಡಿಸಲು ನಿಮಗೇನು ತೊಂದರೆ ಇಲ್ಲ ಎಂದರೆ ಸಾಕ್ಷಿ 1 ನೇ ಎದುರುದಾರನ ಸ್ನೇಹಿತನಾಗಿರುವುದರಿಂದ ನನ್ನ ಬಳಿ ಮಾತನಾಡುವುದಿಲ್ಲ ಎಂದು ಹೇಳುತ್ತಾರೆ.

ನಿಮ್ಮ ಅರ್ಜಿಯಲ್ಲಿ ಪ್ಯಾರಾ 17 ರಲ್ಲಿ ಹೇಳಿರುವಂತೆ ದಿಃ05-02-2021 ಹಾಗೂ ದಿಃ06-02-2021 ರಂದು ಫೋನ್ ಕರೆ ಮಾಡಿದ ಬಗ್ಗೆ Call register (ಕರೆ ದಾಖಲಾತಿ)ಯನ್ನು ಒದಗಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿ ನಾನು ಹೇಗೆ ಒದಗಿಸಲಿ ಎಂದು ಹೇಳುತ್ತಾರೆ. ಸದರಿ ಪ್ಯಾರಾ ದಲ್ಲಿ 1 ನೇ ಎದುರುದಾರ ಹುಣಸೂರಿನ ತಮ್ಮ ಮನೆಗೆ ಬರುವಂತೆ ಹೇಳಿದ ಎಂದು ನಮೂದಿಸಿದ್ದು, ಅದು ಯಾವ ದಿನಾಂಕದಂದು ಕರೆದಿದ್ದರು ಎಂದರೆ ಸಾಕ್ಷಿ ದಿಃ06-02-2021 ಎಂದು ಹೇಳುತ್ತಾರೆ. ನೀವು ಸದರಿ ದಿನ ಮೈಸೂರಿನಿಂದ ಹೊರಟಾಗ ಎಷ್ಟು ಸಮಯ ಆಗಿತ್ತು ಎಂದರೆ ಸಾಕ್ಷಿ 6.30 ಎಂದು ಹೇಳುತ್ತಾರೆ. ನೀವು ಹುಣಸೂರಿಗೆ ತಲುಪಿದಾಗ ಎಷ್ಟು ಸಮಯ ಆಗಿತ್ತು ಎಂದರೆ ಸಾಕ್ಷಿ 7.30 ಎಂದು ಹೇಳುತ್ತಾರೆ. 1 ನೇ ಎದುರುದಾರರ ಮನೆ ಹತ್ತಿರ ಹೋಗುವಷ್ಟರಲ್ಲಿ ಎಷ್ಟು ಸಮಯ ಆಗಿತ್ತು ಎಂದರೆ ಸಾಕ್ಷಿ 8.00 ಗಂಟೆ ಎಂದು ಹೇಳುತ್ತಾರೆ. ನೀವು 1 ನೇ ಎದುರುದಾರನ ಮನೆಯ ಹತ್ತಿರ ಹೋಗಿದ್ದನ್ನು ನೋಡಿದವರು ಇದ್ದಾರಾ ಎಂದರೆ ಸಾಕ್ಷಿ 1 ನೇ ಎದುರುದಾರರ ಅಕ್ಕ-ಪಕ್ಕದ ಮನೆಯವರು ಹಾಗೂ 1 ರಿಂದ 3 ನೇ ಎದುರುದಾರರು ಇದ್ದರು ಎಂದು ಹೇಳುತ್ತಾರೆ. 1 ನೇ ಎದುರುದಾರರ ಅಕ್ಕ-ಪಕ್ಕದ ಮನೆಯವರ ಹೆಸರೇನು ಎಂದರೆ ಸಾಕ್ಷಿ ಅಷ್ಟು ಗೊತ್ತಿಲ್ಲ ಎಂದು ಹೇಳುತ್ತಾರೆ. 1 ನೇ ಎದುರುದಾರರ ಅಕ್ಕ-ಪಕ್ಕದ ಮನೆಯವರನ್ನು ಕರೆಸಿ ನಿಮ್ಮ ಪರ ಸಾಕ್ಷ್ಯ ನುಡಿಸಲು ನಿಮಗೇನು ತೊಂದರೆ ಇಲ್ಲ ಎಂದರೆ ಸಾಕ್ಷಿ ಸದರಿಯವರು 1 ನೇ ಎದುರುದಾರರ ಕುಟುಂಬದವರೇ ಆಗಿರುವುದರಿಂದ, ಅವರು ನಮ್ಮ ಬಳಿ ಮಾತನಾಡುವುದಿಲ್ಲ ಎಂದು ಹೇಳುತ್ತಾರೆ. ನಿಮ್ಮ ಜನಾಂಗದವರು ಯಾರಾದರೂ 1 ನೇ ಎದುರುದಾರರ ಮನೆಯ ಬಳಿ ಹೋದ ಬಗ್ಗೆ ನೋಡಿದವರು ಇದ್ದಾರಾ ಎಂದರೆ ಸಾಕ್ಷಿ ಯಾರು ಇಲ್ಲ ಎಂದು ಹೇಳುತ್ತಾರೆ. 8.00 ಗಂಟೆಯಾದ ನಂತರ ನೀವು ಏಲ್ಲಿ ಹೋದಿರಿ ಎಂದರೇ ಸಾಕ್ಷಿ

ಮನೆಯಿಂದ ಹೊರಗೆ ತಳ್ಳಿದ ನಂತರ ಮನೆಯ ಹೊರಗಿನ ಜಗಲಿಯಲ್ಲೇ ಮಲಗಿಕೊಂಡೆ ಎಂದು ಹೇಳುತ್ತಾರೆ.

ನಿಮ್ಮನ್ನು ಮನೆಯಿಂದ ಹೊರಗೆ ಯಾರು ತಳ್ಳಿದ್ದು ಎಂದರೆ ಸಾಕ್ಷಿ 3 ನೇ ಎದುರುದಾರರು ಎಂದು ಹೇಳುತ್ತಾರೆ. 3 ನೇ ಎದುರುದಾರರು ಮನೆಯಿಂದ ಹೊರ ತಳ್ಳಿದ್ದನ್ನು ನೋಡಿದವರು ಇದ್ದಾರಾ ಎಂದರೆ ಸಾಕ್ಷಿ ಅಕ್ಕಪಕ್ಕದ ಮನೆಯವರು ಎಂದು ಹೇಳುತ್ತಾರೆ. ಬೆಳಿಗ್ಗೆ ಎಷ್ಟು ಗಂಟೆಗೆ ಏದ್ದೀರಿ ಎಂದರೆ ಸಾಕ್ಷಿ 6.00 ಗಂಟೆಗೆ ಎದ್ದು, ಹುಣಸೂರಿಗೆ ಬಂದು, 1 ನೇ ಎದುರುದಾರನಿಗೆ ಕರೆ ಮಾಡಿದೆ, ಅವರು ರಾತ್ರಿಯೇ ಕೆ.ಆರ್.ನಗರದ ಅವರ ಅಕ್ಕನ ಹೋಗಿದ್ದರಿಂದ ನಾನು ಅಲ್ಲಿಗೆ ಹೊದೆ ಎಂದು ಹೇಳುತ್ತಾರೆ.

ನಿಮ್ಮ ಊರಿನಲ್ಲಿ 5.00 ಗಂಟೆಗೆ ಎದ್ದು, ಜನ ಹಸು ಕರೆಯುವುದು ಹಾಗೂ ದೈನಂದಿನ ಚಟುವಟಿಕೆ ಮಾಡುತ್ತಾರೆ ಎಂದರೆ ಸರಿ. ನೀವು ಬೆಳಿಗ್ಗೆ 6.00 ಗಂಟೆಗೆ ಎದ್ದುದ್ದನ್ನು ನೋಡಿದವರು ಇದ್ದಾರಾ ಎಂದರೆ ಸಾಕ್ಷಿ ನಾನು ಅಷ್ಟಾಗಿ ಗಮನಿಸಲಿಲ್ಲ ಎಂದು ಹೇಳುತ್ತಾರೆ. ನೀವು ಮೈಸೂರಿನಿಂದ 6.30 ಗಂಟೆಗೆ ಬಿಟ್ಟು 1 ನೇ ಎದುರುದಾರನ ಮನೆಯ ಹತ್ತಿರ ಹೋಗಿರಲಿಲ್ಲ, ನೀವು ಅವರ ಮನೆಯ ಬಳಿ ಮಲಗೂ ಇರಲಿಲ್ಲ, ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. 1 ನೇ ಎದುರುದಾರ ದಿಃ06-02-2021 ರಂದು ನಿಮಗೆ ಯಾವುದೇ ಕರೆ ಮಾಡಿಲ್ಲ, ನೀವು ಸಹ ಅವರಿಗೆ ಕರೆ ಮಾಡಿಲ್ಲ ಎಂದರೆ ಸಾಕ್ಷಿ ನಾನು ಮಾಡಿದ್ದೆ ಎಂದು ಹೇಳುತ್ತಾರೆ.

4 ಮತ್ತು 5 ನೇ ಎದುರುದಾರರ ಮನೆ ಕೆ.ಆರ್,ನಗರದಲ್ಲಿ ಏಲ್ಲಿದೆ ಎಂದರೆ ಸಾಕ್ಷಿ ವಿದ್ಯಾನಗರ ಎಂದು ಹೇಳುತ್ತಾರೆ. ಸದರಿ ಮನೆ ಸಂ. ಏನು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. 4 ಮತ್ತು 5 ನೇ ಎದುರುದಾರರ ಮನೆ ಕೆ.ಆರ್,ನಗರದ ಯಾವ ಅಡ್ಡರಸ್ತೆ, ಮುಖ್ಯರಸ್ತೆಯಲ್ಲಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. 4 ಮತ್ತು 5 ನೇ ಎದುರುದಾರರ ಮನೆಯ ಅಕ್ಕಪಕ್ಕ ಎಷ್ಟು ಮನೆಗಳಿವೆ ಎಂದರೆ ಸಾಕ್ಷಿ ಮನೆಗಳು ಗೊತ್ತಿಲ್ಲ ಎಂದು ಹೇಳುತ್ತಾರೆ. 4 ಮತ್ತು 5 ನೇ ಎದುರುದಾರರ ಮನೆ ಯಾವ ಬಣ್ಣದ್ದು ಎಂದರೆ ಸಾಕ್ಷಿ ಕೇಸರಿ, ಹಸಿರು ಮತ್ತು ನಿಲಿ ಬಣ್ಣದ್ದು ಎಂದು ಹೇಳುತ್ತಾರೆ. 4 ಮತ್ತು 5 ನೇ ಎದುರುದಾರರ ಮನೆ ಬಾಗಿಲು ಯಾವ ದಿಕ್ಕಿಗೆ ಇದೆ ಎಂದರೆ ಸಾಕ್ಷಿ ಸೂರ್ಯ ಹುಟ್ಟುವ ಕಡೆ ಎಂದು ಹೇಳುತ್ತಾರೆ. ನೀವು 4 ಮತ್ತು 5 ನೇ ಎದುರುದಾರರ

ಮನೆಗೆ ಹೋಗಿದ್ದನ್ನು ನೋಡಿದವರು ಇದ್ದಾರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನೀವು ಹುಣಸೂರಿನಿಂದ ಕೆ.ಆರ್.ನಗರದ 4 ಮತ್ತು 5 ನೇ ಎದುರುದಾರರ ಮನೆಗೆ ಹೋಗಿಲ್ಲ, ನೀವು ಸದರಿಯವರ ಮನೆಯನ್ನು ನೋಡಿಲ್ಲ, ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು